# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಗುರುವಾರ, ೨೩, ಏಪ್ರಿಲ್, ೨೦೨೬ (ವೈಶಾಖ, ೦೩, ಶಕವರ್ಷ, ೧೯೪೮)<br>BENGALURU, THURSDAY, 23, APRIL, 2026 ( VAISHAKHA , 03, SHAKAVARSHA, 1948) | ನಂ. ೩೨೭<br>No. 327 |
|---|---|---|

**ಕರ್ನಾಟಕ ಸರ್ಕಾರ**

**ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ**

**ನಂ.204, 2ನೇ ಮಹಡಿ, 3ನೇ ಗೇಟ್,**
**ಬಹುಮಹಡಿಗಳ ಕಟ್ಟಡ,**
**ಬೆಂಗಳೂರು-560001**

**ಸಂಖ್ಯೆ:** ಕಪಂರಾಸೀನಿಆ/81/ಪ್ರಾ.ಗ.ನಿ/2023 **ದಿನಾಂಕ:23-04-2026**

## ಪ್ರಕಟಣೆ

**ವಿಜಯಪುರ ಜಿಲ್ಲೆಯ ಆಲಮೇಲ, ಸಿಂಧಗಿ, ತಾಳಿಕೋಟಿ ಮತ್ತು ಬಸವನ ಬಾಗೇವಾಡಿ ತಾಲ್ಲೂಕುಗಳ ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತು.**

ಕಂದಾಯ ಇಲಾಖೆಯು, ವಿಜಯಪುರ ಜಿಲ್ಲೆಯ, ಆಲಮೇಲ ತಾಲ್ಲೂಕಿನ 7 ಗ್ರಾಮಗಳನ್ನು ಸಿಂಧಗಿ ತಾಲ್ಲೂಕಿಗೆ ಮತ್ತು ತಾಳಿಕೋಟಿ ತಾಲ್ಲೂಕಿನ 1 ಗ್ರಾಮವನ್ನು ಬಸವನ ಬಾಗೇವಾಡಿ ತಾಲ್ಲೂಕಿಗೆ ಸೇರ್ಪಡೆಗೊಳಿಸಿ ಅಧಿಸೂಚನೆ ಸಂಖ್ಯೆ:ಆರ್ ಡಿ 16 ಎಲ್ ಆರ್ ಡಿ2023, ದಿನಾಂಕ:09.10.2024, 20.12.2024 ಮತ್ತು ಆರ್ ಡಿ 74 ಎಲ್ ಆರ್ ಡಿ2024, ದಿನಾಂಕ:05.05.2024ರಲ್ಲಿ ಅಧಿಸೂಚನೆ ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಆಲಮೇಲ, ಸಿಂಧಗಿ, ತಾಳಿಕೋಟಿ ಮತ್ತು ಬಸವನ ಬಾಗೇವಾಡಿ ತಾಲ್ಲೂಕುಗಳ ಜನಸಂಖ್ಯೆಯಲ್ಲಿ ಬದಲಾವಣೆಯಾಗುವುದರಿಂದ, ಸರ್ಕಾರವು, ದಿನಾಂಕ:16.12.2023ರ ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚಿಸಿದ್ದ ವಿಜಯಪುರ ಜಿಲ್ಲೆಯ ಆಲಮೇಲ, ಸಿಂಧಗಿ, ತಾಳಿಕೋಟಿ ಮತ್ತು ಬಸವನ ಬಾಗೇವಾಡಿ ತಾಲ್ಲೂಕುಗಳ ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು, ಅಧಿಸೂಚನೆ ಸಂಖ್ಯೆ:RDPR 2 ZPS 2026, ದಿನಾಂಕ:23.03.2026ರಲ್ಲಿ ಹಿಂಪಡೆದು ಆದೇಶಿಸಿದೆ. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ವಿಜಯಪುರ ಜಿಲ್ಲೆಯ, ಆಲಮೇಲ ತಾಲ್ಲೂಕು, ಸಿಂಧಗಿ ತಾಲ್ಲೂಕು, ತಾಳಿಕೋಟೆ ಮತ್ತು ಬಸವನಬಾಗೇವಾಡಿ ತಾಲ್ಲೂಕುಗಳ ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿಯನ್ನು ನಿಯಮಾನುಸಾರ ರಚಿಸಬೇಕಾಗಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 121, 122 ಮತ್ತು 124 ರನ್ವಯ ಹಾಗೂ 308(ಇ)(ಎಫ್)ರ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ವಿಜಯಪುರ ಜಿಲ್ಲೆಯ, **ವಿಜಯಪುರ ಜಿಲ್ಲೆಯ, ಆಲಮೇಲ, ಸಿಂಧಗಿ, ತಾಳಿಕೋಟಿ ಮತ್ತು ಬಸವನ ಬಾಗೇವಾಡಿ** ತಾಲ್ಲೂಕುಗಳ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಟಕ **'ಅ'** ದಲ್ಲಿರುವಂತೆ ನಿಗದಿಪಡಿಸಿದೆ. **'ಅ'** ಕೋಷ್ಟಕದ **2ನೇ** ಅಂಕಣದಲ್ಲಿರುವ ತಾಲ್ಲೂಕಿನಿಂದ

ಆಯ್ಕೆಯಾಗುವ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು **3ನೇ** ಅಂಕಣದಲ್ಲಿ ನಿಗದಿಪಡಿಸಿದೆ.

ವಿಜಯಪುರ ಜಿಲ್ಲೆಯ, **ವಿಜಯಪುರ ಜಿಲ್ಲೆಯ, ಆಲಮೇಲ, ಸಿಂಧಗಿ, ತಾಳಿಕೋಟಿ ಮತ್ತು ಬಸವನ ಬಾಗೇವಾಡಿ** ತಾಲ್ಲೂಕುಗಳ ತಾಲ್ಲೂಕು ಪಂಚಾಯತಿ ವ್ಯಾಪ್ತಿಯೊಳಗಿರುವ ಪ್ರದೇಶಗಳನ್ನು ಅನುಕ್ರಮವಾಗಿ **9, 13, 9 ಮತ್ತು 13** ಏಕ ಸದಸ್ಯ ತಾಲ್ಲೂಕು ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಅವುಗಳ ಸೀಮಾ/ಗಡಿಯನ್ನು ಕೋಷ್ಟಕ **'ಆ'** ದಲ್ಲಿರುವಂತೆ ನಿರ್ಣಯಿಸಿದೆ. **'ಆ'** ಕೋಷ್ಟಕದ **2ನೇ** ಅಂಕಣದಲ್ಲಿ ಪ್ರತಿಯೊಂದು ತಾಲ್ಲೂಕು ಪಂಚಾಯತಿಯ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರನ್ನು ಮತ್ತು ಕೋಷ್ಟಕದ **3ನೇ** ಅಂಕಣದಲ್ಲಿ ನಮೂದಿಸಿರುವ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಆ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯೆಂದು ನಿಗದಿಪಡಿಸಿದೆ.

ವಿಜಯಪುರ ಜಿಲ್ಲೆಯ, **ವಿಜಯಪುರ ಜಿಲ್ಲೆಯ, ಆಲಮೇಲ, ಸಿಂಧಗಿ, ತಾಳಿಕೋಟಿ ಮತ್ತು ಬಸವನ ಬಾಗೇವಾಡಿ** ತಾಲ್ಲೂಕುಗಳ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ **7** (ಏಳು) ದಿವಸಗಳ ಒಳಗಾಗಿ **ಅಂದರೆ ದಿನಾಂಕ:29-04-2026, ಸಂಜೆ 5.00 ಗಂಟೆಯ ಒಳಗೆ** ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಹಾಗೂ ಖುದ್ದಾಗಿ/ಅಂಚೆಯ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಆಯೋಗವು ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಆಯೋಗವು ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

**(ಅ) ಆನ್ ಲೈನ್ ಮೂಲಕ:**

**ವೆಬ್ ಸೈಟ್ ವಿಳಾಸ: "https://rdpr.karnataka.gov.in/rdc/public/"** ಸದರಿ ವೆಬ್‌ಸೈಟ್‌ನ ಮುಖಪುಟದ ಎಡಭಾಗದಲ್ಲಿರುವ ಸಾರ್ವಜನಿಕ ಸಲಹೆಗಳು ಎಂಬ ಶೀರ್ಷಿಕೆಯನ್ನು CLICK ಮಾಡಿ ತಮ್ಮ ಆಕ್ಷೇಪಣೆಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಬಹುದು.

**(ಆ) ಖುದ್ದಾಗಿ/ಅಂಚೆ ಮೂಲಕ:**

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ.
3ನೇ ಗೇಟ್, 2ನೇ ಮಹಡಿ, ಕೊಠಡಿ ಸಂಖ್ಯೆ: 222/A, ಬಹುಮಹಡಿ ಕಟ್ಟಡ,
ಅಂಬೇಡ್ಕರ್ ವೀಧಿ, ಬೆಂಗಳೂರು-560001.

**ಕೋಷ್ಟಕ 'ಅ'**

| ವಿಜಯಪುರ ಜಿಲ್ಲೆ | | |
|---|---|---|
| **ಕ್ರ. ಸಂ.** | **ತಾಲ್ಲೂಕು ಪಂಚಾಯತಿಯ ಹೆಸರು** | **ತಾಲ್ಲೂಕು ಪಂಚಾಯತಿಯ ಸದಸ್ಯರ ಸಂಖ್ಯೆ** |
| 1 | 2 | 3 |
| 1 | ಆಲಮೇಲ | 9 |
| 2 | ಸಿಂಧಗಿ | 13 |
| 3 | ತಾಳಿಕೋಟಿ | 9 |
| 4 | ಬಸವನ ಬಾಗೇವಾಡಿ | 13 |
| ಒಟ್ಟು | | 44 |

## ಕೋಷ್ಟಕ 'ಆ'

| ವಿಜಯಪುರ ಜಿಲ್ಲೆ | | |
|---|---|---|
| ಕ್ರ ಸಂ | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 |
| **ಆಲಮೇಲ ತಾಲ್ಲೂಕು ಪಂಚಾಯಿತಿ** | | |
| 1 | 1-ಕಡಣಿ | ಕಡಣಿ, ತಾವರಖೇಡ, ತಾರಾಪೂರ, ಮಡ್ನಳ್ಳಿ, ಕುರುಬತ್ತಹಳ್ಳಿ. |
| 2 | 2-ದೇವಣಗಾಂವ | ದೇವಣಗಾಂವ, ಕಡ್ಲೇವಾಡ ಪಿ.ಎ, ಶಂಭೇವಾಡ , ಬ್ಯಾಡಗಿಹಾಳ. |
| 3 | 3-ಕುಮಸಗಿ | ಕುಮಸಗಿ, ದೇವರನಾವದಗಿ, ಆಲಹಳ್ಳಿ. |
| 4 | 4-ಬಳಗಾನೂರ | ಬಳಗಾನೂರ, ರಾಮನಳ್ಳಿ. |
| 5 | 5-ಕೋರಹಳ್ಳಿ | ಕೋರಹಳ್ಳಿ, ಹೂವಿನಹಳ್ಳಿ, ಮದರಿ, ಉಚಿತನಾವದಗಿ, ನಾಗರಹಳ್ಳಿ, ಗುಡ್ಡಳ್ಳಿ ತೊಂಟಾಪೂರ, ವಿಭೂತಿಹಳ್ಳಿ. |
| 6 | 6-ಮೋರಟಗಿ | ಮೋರಟಗಿ, ಬಗಲೂರ, ಕುಳೇಕುಮಟಗಿ. |
| 7 | 7-ಮಲಘಾಣ | ಮಲಘಾಣ, ಸೋಮಜಾಳ , ಮಂಗಳೂರ, ಆಸಂಗಿಹಾಳ. |
| 8 | 8-ಕಕ್ಕಳಮೇಲಿ | ಕಕ್ಕಳಮೇಲಿ, ಬಸವನಗರ, ಜಟ್ನಾಳ, ಶಿರಸಗಿ , ಚಿಕ್ಕಹಾವಳಗಿ. |
| 9 | 9-ಬಮ್ಮನಹಳ್ಳಿ | ಬಮ್ಮನಹಳ್ಳಿ, ಗುಂದಗಿ. |
| **ಸಿಂಧಗಿ ತಾಲ್ಲೂಕು ಪಂಚಾಯಿತಿ** | | |
| 1 | 1-ಚಟ್ಟರಕಿ | ಚಟ್ಟರಕಿ, ಸೊಂಪೂರ, ಸುರಗಿಹಳ್ಳಿ, ಹಚ್ಯಾಳ. |
| 2 | 2-ಚಾಂದಕವಠೆ | ಚಾಂದಕವಠೆ, ಗಣಿಹಾರ, ಬಾಬು ನಗರ. |
| 3 | 3-ರಾಂಪೂರ ಪಿ.ಎ | ರಾಂಪೂರ ಪಿ.ಎ, ರಾಮನಗರ, ಸಿಂದಗಿ ಗ್ರಾಮೀಣ, ಬೆನಕೊಟಗಿ, ಬಬಲೇಶ್ವರ, ಕಲಹಳ್ಳಿ, ಹಿಕ್ಕನಗುತ್ತಿ. |
| 4 | 4-ಯರಗಲ್ ಬಿ.ಕೆ | ಯರಗಲ್ ಬಿ.ಕೆ, ಯರಗಲ್ ಕೆ.ಡಿ, ಬಂಕಲಗಿ, ಬ್ಯಾಲಿಹಾಳ, ಗುತ್ತರಗಿ. |
| 5 | 5-ಸುಂಗಠಾಣ | ಸುಂಗಠಾಣ, ಮುರುಡಿ, ನಂದಗೇರಿ, ಗೋರವಗುಂಡಗಿ, ನಾಗಾವಿ ಕೆ ಡಿ, ನಾಗಾವಿ ಬಿ ಕೆ, ಹನುಮಾನ ನಗರ. |
| 6 | 6-ಯಂಕಂಚಿ | ಯಂಕಂಚಿ, ಖೈನೂರ, ಅಂತರಗಂಗಿ, ಬ್ಯಾಕೋಡ, ಮನ್ನಾಪೂರ. |
| 7 | 7-ಗೋಲಗೇರಿ | ಗೋಲಗೇರಿ, ಸಾಸಾಬಾಳ, ಚಿಕ್ಕಅಲ್ಲಾಪೂರ, ಡಂಬಳ, ಡವಳಾರ, ಮಾಡಬಾಳ, ಬನ್ನಟ್ಟಿ ಪಿ.ಎ. |

| ವಿಜಯಪುರ ಜಿಲ್ಲೆ | | |
|---|---|---|
| ಕ್ರ ಸಂ | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 |
| 8 | 8-ಹೊನ್ನಳ್ಳಿ | ಹೊನ್ನಳ್ಳಿ, ಬ್ರಹ್ಮದೇವನಮಡು, ಖಾನಾಪೂರ, ಕರವಿನಾಳ. |
| 9 | 9-ಬಂದಾಳ | ಬಂದಾಳ, ಬೂದಿಹಾಳ ಪಿ.ಎಚ್, ಓತಿಹಾಳ, ಚಿಕ್ಕ ಸಿಂದಗಿ. |
| 10 | 10-ಕನ್ನೊಳ್ಳಿ | ಕನ್ನೊಳ್ಳಿ, ಕೊಕಟನೂರ, ಚಿಕ್ಕ ಕೊಕಟನೂರ. |
| 11 | 11-ಗುಬ್ಬೇವಾಡ | ಗುಬ್ಬೆವಾಡ, ಕಣ್ಣಗುಡ್ಡಿಹಾಳ, ಬೋರಗಿ, ಪುರಧಾಳ, ಶಾಖಾಪೂರ. |
| 12 | 12-ಹಂದಿಗನೂರ | ಹಂದಿಗನೂರ, ಭವಾನಿ ನಗರ, ಬಸ್ತಿಹಾಳ, ಹಡಗೀನಾಳ. |
| 13 | 13-ಗಬಸಾವಳಗಿ | ಗಬಸಾವಳಗಿ, ಆಹೇರಿ, ಬಿಸನಾಳ, ಕೆರೂರ, ಹಂಚಿನಾಳ, ಬಂಟನೂರ. |
| ತಾಳಿಕೋಟಿ ತಾಲ್ಲೂಕು ಪಂಚಾಯಿತಿ | | |
| 1 | 1-ಕಲಕೇರಿ | ಕಲಕೇರಿ, ರಾಂಪೂರಪಿಟಿ , ಬಿಂಜಲಭಾವಿ, ಬೆಕಿನಾಳ. |
| 2 | 2-ಅಸ್ಕಿ | ಅಸ್ಕಿ, ನೀರಲಗಿ, ವಣಕಿಹಾಳ, ಬೂದಿಹಾಳ.ಪಿಟಿ, ಹಾಳಗುಂಡಕನಾಳ, ಜಲಪೂರ ತುರಕನಗೇರಿ, ಬನ್ನೆಟ್ಟಿ .ಪಿ.ಟಿ. |
| 3 | 3-ತುಂಬಗಿ | ತುಂಬಗಿ, ಹೊಸಹಳ್ಳಿ, ಹೂವಿನಹಳ್ಳಿ ಪತ್ತೇಪೂರಪಿಟಿ ಸಾಸನೂರ, ಚಬನೂರ. |
| 4 | 4-ಭಂಟನೂರ | ಭಂಟನೂರ, ಪೀರಾಪೂರ, ಗೊಟಖಂಡಕಿ, ಶಳ್ಳಗಿ, ಬೊಮ್ಮನಹಳ್ಳಿ, ಬೋಳವಾಡ, ಗುತ್ತಿಹಾಳ. |
| 5 | 5-ಕೊಡಗಾನೂರ | ಕೊಡಗಾನೂರ, ಕಾರಗನೂರ, ಲಕ್ಕುಂಡಿ, ಬೇಲೂರ, ಕ್ಯಾತನಾಳ, ಗಡಿಸೋಮನಾಳ, ನಾವದಗಿ. |
| 6 | 6-ಬ.ಸಾಲವಾಡಗಿ | ಬಿಸಾಲವಾಡಗಿ, ಮಟಕಲದೇವನಹಳ್ಳಿ, ಗುಂಡಕನಾಳ, ಬಿಳೇಭಾವಿ, ಮಸ್ಕನಾಳ, ಮೈಲೇಶ್ವರ. |
| 7 | 7-ಹಿರೂರ | ಹಿರೂರ, ತಮದಡ್ಡಿ, ಚೋಕಾವಿ, ಬಳಗಾನೂರ. |
| 8 | 8-ಕೊಣ್ಣೂರ | ಕೊಣ್ಣೂರ, ಪಡೇಕನೂರ, ಬಾವೂರ, ಕೂಚಬಾಳ, ಲಿಂಗದಳ್ಳಿ, ವನಹಳ್ಳಿ. |

| ವಿಜಯಪುರ ಜಿಲ್ಲೆ | | |
|---|---|---|
| ಕ್ರ ಸಂ | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 |
| 9 | 9-ಮಿಣಜಗಿ | ಮಿಣಜಗಿ, ಮೂಕಿಹಾಳ, ಶಿವಪೂರ, ನಾಗೂರ, ಹರನಾಳ, ಹಡಗಿನಾಳ, ಕಲ್ಲದೇವನಹಳ್ಳಿ, ಹಗರಗುಂಡ. |
| **ಬಸವನ ಬಾಗೇವಾಡಿ ತಾಲ್ಲೂಕು ಪಂಚಾಯಿತಿ** | | |
| 1 | 1-ಡೋಣೂರ | ಡೋಣೂರ, ಯಂಭತ್ನಾಳ, ಮುಲ್ವಾಳ, ನೇಗಿನಾಳ, ಬೊಮ್ಮನಹಳ್ಳಿ, ಬಿಸನಾಳ. |
| 2 | 2-ಉಕ್ಕಲಿ | ಉಕ್ಕಲಿ, ಬಸವೇಶ್ವರನಗರ. |
| 3 | 3-ಇಂಗಳೇಶ್ವರ | ಇಂಗಳೇಶ್ವರ, ಕೃಷ್ಣಾಪೂರ, ರಬಿನಾಳ. |
| 4 | 4-ದಿಂಡವಾರ | ದಿಂಡವಾರ, ಕಾಮನಕೇರಿ, ಉತ್ನಾಳ, ರಾಮನಗರ, ಬೂದಿಹಾಳ. |
| 5 | 5-ಕುದರಿ ಸಾಲವಾಡಗಿ | ಕುದರಿಸಾಲವಾಡಗಿ, ಕರಭಂಟನಾಳ. |
| 6 | 6-ಹೂವಿನ ಹಿಪ್ಪರಗಿ | ಹೂವಿನಹಿಪ್ಪರಗಿ, ಅಗಸಬಾಳ, ಹುಣಶ್ಯಾಳಪಿಬಿ, ಸಂಕನಾಳ. |
| 7 | 7-ಮಸಬಿನಾಳ | ಮಸಬಿನಾಳ, ದೇಗಿನಾಳ. |
| 8 | 8-ಯರನಾಳ | ಯರನಾಳ, ಹತ್ತರಕಿಹಾಳ, ನಂದಿಹಾಳಪಿಯು. |
| 9 | 9-ಮುತ್ತಗಿ | ಮುತ್ತಗಿ, ಟಕ್ಕಳಕಿ, ನಾಗವಾಡ. |
| 10 | 10-ನಾಗೂರ | ನಾಗೂರ, ಮಣ್ಣೂರ, ಉಪ್ಪಲದಿನ್ನಿ, ಸೇವಾಲಾಲನಗರ, ಹಂಗರಗಿ. |
| 11 | 11-ವಡವಡಗಿ | ವಡವಡಗಿ, ಹುಲಿಬೆಂಚಿ, ನಾಗರಾಳಹುಲಿ, ನಂದಿಹಾಳಪಿಎಚ್, ಸಿಂದಗೇರಿ, ಶರಣಸೋಮನಾಳ. |
| 12 | 12-ಕಣಕಾಲ | ಕಣಕಾಲ, ಕಾನ್ನಾಳ, ಬ್ಯಾಕೋಡ, ಜಾಯವಾಡಗಿ, ಸೋಲವಾಡಗಿ. |
| 13 | 13-ನರಸಲಗಿ | ನರಸಲಗಿ, ಹಂಚಿನಾಳ, ಇವಣಗಿ, ಅಂಬಳನೂರ. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**ವಿಶೇಷ ಸೂಚನೆ:-**

**ವಿಜಯಪುರ ಜಿಲ್ಲೆಯ, ಆಲಮೇಲ, ಸಿಂಧಗಿ, ತಾಳಿಕೋಟೆ ಮತ್ತು ಬಸವನ ಬಾಗೇವಾಡಿ ತಾಲ್ಲೂಕುಗಳ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತಂತೆ, ದಿನಾಂಕ:29-04-2026ರ ಒಳಗಾಗಿ ಸಲ್ಲಿಸಲ್ಪಟ್ಟ ಆಕ್ಷೇಪಣೆ/ಅಹವಾಲುಗಳ ಪರಿಶೀಲನಾ ಅದಾಲತ್ ಅನ್ನು ದಿನಾಂಕ:30-04-2026 ರಂದು ಬೆಳಿಗ್ಗೆ11:00 ರಿಂದ ಮಧ್ಯಾಹ್ನ 1:30 ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್-ನಂ-2, 2ನೇ ಮಹಡಿ, ಕೊಠಡಿ ಸಂಖ್ಯೆ:204, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಇಲ್ಲಿ ನಡೆಸಲಾಗುವುದು. ಆಕ್ಷೇಪಣೆ ಮತು ಅಹವಾಲುಗಳನ್ನು ಸಲ್ಲಿಸಿರುವವರು ಅದಾಲತ್ ನಲ್ಲಿ ಭಾಗವಹಿಸಲು ಇಚ್ಛಿಸಿದಲ್ಲಿ, ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯ ಮೂಲ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು.**

**(ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಹಾಗೂ ಸದಸ್ಯ ಕಾರ್ಯದರ್ಶಿ
ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH